526(947) ಶ್ರೀ ಪಾಟೀಲ್ ಎಂ ವೈ (ಅಫ್ಜಲ್‌ಪುರ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಗುಲ್ಬರ್ಗಾ ಜಿಲ್ಲೆಯಲ್ಲಿರುವ ಪದವಿ ಕಾಲೇಜುಗಳ ಸಂಖ್ಯೆಗಳೆಷ್ಟು,

ಆ) ಹೊಸದಾಗಿ ಈ ಜಿಲ್ಲೆಗೆ ಪದವಿ ಕಾಲೇಜನ್ನು ಪ್ರಾರಂಭಿಸಲು ಬೇಡಿಕೆಯಿರುವುದು ಸರ್ಕಾರದ ಗಮನದಲ್ಲಿದೆಯೇ,

ಇ) ಬಂದಿದ್ದಲ್ಲಿ, ಅಫಜಲಪುರ ಮತಕ್ಷೇತ್ರದಲ್ಲಿ ಕರಜಗಿ ಗ್ರಾಮಕ್ಕೆ ಪ್ರಥಮ ದರ್ಜೆ ಕಾಲೇಜು ಬೇಡಿಕೆ ಇರುವುದರಿಂದ, ಇದೇ ಶೈಕ್ಷಣಿಕ ವರ್ಷದಲ್ಲಿ ಕಾಲೇಜು ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಡಿ ಎಚ್ ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು)

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ 10 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿರುತ್ತವೆ

ಆ) ಹೌದು

ಇ) ಅಫಜಲಪುರ ಮತಕ್ಷೇತ್ರ ಕರಜಗಿ ಗ್ರಾಮದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭಿಸುವ ಬಗ್ಗೆ ನಿರ್ದಿಷ್ಟ ಪ್ರಸ್ತಾವನೆ ಬಂದಿರುವುದಿಲ್ಲ

527(348) ಶ್ರೀ ಎಸ್ ಎಸ್ ಸಾಟೀಲ (ಮುಂಡರಗಿ) ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಮುಂಡರಗಿ ಮತದಾರ ಕ್ಷೇತ್ರದಲ್ಲಿ ಬಡಜನರಿಗೆ ಕಟ್ಟುವ ಮನೆಗಳು ಅಪೂರ್ಣಗೊಂಡಿರುವ ಬಗ್ಗೆ ಗ್ರಾಮವಾರು ವಿವರ ನೀಡುವುದು,

ಆ) ಈ ಮನೆಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು,

ಇ) ಎಷ್ಟು ವರ್ಷಗಳಿಂದ ಅಪೂರ್ಣವಾಗಿ ನಿಂತಿವೆ, (ವಿವರ ನೀಡುವುದು)?

ಶ್ರೀ ಡಿ ಟಿ ಜಯಕುಮಾರ್ (ವಸತಿ ಸಚಿವರು)

ಅ) **ಗ್ರಾಮೀಣ ಪ್ರದೇಶ**

ಮುಂಡರಗಿ ಮತದಾರ ಕ್ಷೇತ್ರದ ಬಡಜನರಿಗೆ ಕಟ್ಟುವ ಮನೆಗಳು ಅಪೂರ್ಣಗೊಂಡಿರುವ ಗ್ರಾಮವಾರು ವಿವರ ಈ ಕೆಳಗಿನಂತಿದೆ ಇದರಲ್ಲಿ 2005–06ನೇ ಸಾಲಿನ ಮನೆಗಳು ಪ್ರಸ್ತುತ ಸಾಲಿನಲ್ಲಿ ಪ್ರಾರಂಭ–